

# ರಸಗೊಬ್ಬರ ಬೆಲೆ 50 ಕೇಜಿಗೆ ₹700 ದಿಢೀರ್ ಏರಿಕೆ!

## ಪ್ರತಿ ಚೀಲಕ್ಕೆ ₹1200 ಇದ್ದ ಡಿಎಪಿ ₹1900ಕ್ಕೇರಿಕೆ | ಇತರ ಗೊಬ್ಬರಗಳೂ ಕೂಡ ₹425ರಿಂದ ₹700 ವರೆಗೆ ಹೆಚ್ಚಳ



• **ಸೋಮರಡ್ಡಿ ಅಳವಂಡಿ**
**ಕನ್ನಡಪ್ರಭ ವಾರ್ತೆ** ಕೊಪ್ಪಳ


ಮಾರ್ಚ್ ಆರಂಭದಲ್ಲಷ್ಟೇ ಏರಿಕೆಯಾಗಿದ್ದ ರಸಗೊಬ್ಬರ ಬೆಲೆ ಒಂದು ತಿಂಗಳಲ್ಲಿ ಮತ್ತೆ ಭಾರೀ ಏರಿಕೆ ಕಂಡಿದೆ. ಏ.1ರಿಂದ ಒಂದು ಚೀಲ ರಸಗೊಬ್ಬರಕ್ಕೆ ₹700ಕ್ಕೂ ಅಧಿಕ ಹೆಚ್ಚಳವಾಗಿದ್ದು, ಈ ಬೆಲೆಯನ್ನು ಕಂಡು ರೈತರು ಮಾತ್ರವಲ್ಲದೆ ವ್ಯಾಪಾರಸ್ಥರೂ ತಬ್ಬಿಬ್ಬಾಗಿದ್ದಾರೆ. ಕಚ್ಚಾವಸ್ತುಗಳ ವಿಪರೀತ ಬೆಲೆಯೇರಿಕೆಯೇ ಈ ದಿಢೀರ್ ಬೆಲೆ ಹೆಚ್ಚಳಕ್ಕೆ ಕಾರಣ ಎನ್ನಲಾಗಿದೆ.

ರಸಗೊಬ್ಬರ ಕಂಪನಿಗಳು ಏ.1ರಿಂದಲೇ ದರ ಹೆಚ್ಚಳ ಮಾಡಿ ಆದೇಶ ಹೊರಡಿಸಿವೆ. ಈ ಆದೇಶ ಬೆಳಕಿಗೆ ಬಂದಿದ್ದು ಬುಧವಾರ ಸಂಜೆಯ ವೇಳೆಗೆ. ಇದರ ಪರಿಣಾಮ ಮಾರುಕಟ್ಟೆಯಲ್ಲಿಇನ್ನಷ್ಟೇಆಗಬೇಕಾಗಿದ್ದು, ಕೃಷಿ ಸಮುದಾಯದ ಮೇಲೆ ಭಾರಿ ಪರಿಣಾಮ ಬೀರಲಿದೆ ಎಂದು ಹೇಳಲಾಗಿದೆ.

### ಬೆಲೆ ಏರಿಕೆಗೆ ಕಾರಣವೇನು?

ರಾಸಾಯನಿಕ ಗೊಬ್ಬರಕ್ಕೆ ಬೇಕಾಗುವ ಕಚ್ಚಾವಸ್ತುಗಳಬೆಲೆಮಿತಿಮೀರಿಹೆಚ್ಚಳವಾಗಿದೆ. ಇವುಗಳನ್ನು ಚೀನಾ, ಆಫ್ರಿಕಾ ಮತ್ತಿತರ ದೇಶಗಳಿಂದ ಆಮದು ಮಾಡಿಕೊಳ್ಳಬೇಕು. ಫಾಸ್ಪರಿಕ್ ಆ್ಯಸಿಡ್ ದರ ಬ್ಯಾರಲ್‌ಗೆ 400 ಡಾಲರ್ ಇದ್ದಿದ್ದು 790 ಡಾಲರ್‌ಗೆ ಏರಿಕೆಯಾಗಿದೆ. ಹೀಗಾಗಿ ಉತ್ಪಾದನಾ ವೆಚ್ಚ ದುಪ್ಪಟ್ಟಾಗಿದ್ದು, ಬೆಲೆ ಏರಿಕೆ ಅನಿವಾರ್ಯ ಎನ್ನಲಾಗಿದೆ. ಕೇಂದ್ರ ಸರ್ಕಾರ ರಸಗೊಬ್ಬರ ಬಳಕೆ ಕಡಿಮೆಗೊಳಿಸಲು ಪರೋಕ್ಷವಾಗಿ ದರ ಏರಿಕೆ ಮಾಡುತ್ತಿದೆ ಎನ್ನುವ ಮಾತೂ ಇದೆ.



| ರಸಗೊಬ್ಬರ | ಹಳೆ ದರ | ಹೊಸ ದರ |
|---|---|---|
| ಡಿಎಪಿ | ₹1200 | ₹1900 |
| ಎನ್‌ಪಿಕೆ 10.26.26 | ₹1175 | ₹1775 |
| ಎನ್‌ಪಿಕೆ 12.32.16 | ₹1185 | ₹1800 |
| 20.20.20 | ₹925 | ₹1350 |

*50 ಕೆಜಿಗೆ

**ಯಾವುದಕ್ಕೆ ಎಷ್ಟು?:** ಪ್ರತಿ 50 ಕೆ.ಜಿ. ಚೀಲಕ್ಕೆ ₹1200 ಇದ್ದ ಡಿಎಪಿ ₹1900 ಆಗಿದೆ. ಎನ್‌ಪಿಕೆ 10.26.26 ರಸಗೊಬ್ಬರ ₹1175 ಇದ್ದಿದ್ದು ಪರಿಷ್ಕೃತ ಬೆಲೆ ₹1775 ಆಗಿದೆ. 12.32.16 ರಸಗೊಬ್ಬರ ದರ ₹1185 ಇದ್ದಿದ್ದು ₹1800 ಆಗಿದೆ. 20.20.20 ರಸಗೊಬ್ಬರ ₹925 ಇದ್ದಿದ್ದು ₹1350ಕ್ಕೆ ಹೆಚ್ಚಳವಾಗಿದೆ. ಇದು ಇಫ್ಕೋ ಕಂಪನಿಯ ಗೊಬ್ಬರದ ದರ ಏರಿಕೆಯ ಪ್ರಮಾಣವಾಗಿದ್ದು, ಮಂಗಳೂರಿನ ಎಂಸಿಎಫ್ ಕಂಪನಿಯೂ ದರ ಏರಿಕೆ ಮಾಡಿ ಆದೇಶ ಹೊರಡಿಸಿದೆ. ಅಚ್ಚರಿ ಎಂದರೆ ಎಂಸಿಎಫ್ ಕಂಪನಿ ಕಳೆದ ಮಾರ್ಚ್ ತಿಂಗಳಲ್ಲಿ ಬೆಲೆ ಏರಿಸಿ ಆದೇಶ ಹೊರಡಿಸಿತ್ತು. ಈಗ ಏಕಾಏಕಿ ಮತ್ತೆ ಹೆಚ್ಚಿಸಿದೆ.

**ರೈತರಿಗೆ ದೊಡ್ಡ ಶಾಕ್:** ರಸಗೊಬ್ಬರ ದರ ಮಾರುಕಟ್ಟೆಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗಿರುವ ಉದಾಹರಣೆ ಇದುವರೆಗೂ ಇಲ್ಲವೇ ಇಲ್ಲ. ಅಬ್ಬಬ್ಬಾ ಎಂದರೆ ಚೀಲಕ್ಕೆ ₹50ರಿಂದ ₹100 ಹೆಚ್ಚಳ ಮಾಡುತ್ತಿದ್ದರು. ಇದೇ ಮೊದಲ ಬಾರಿ ಶೇ.40ಕ್ಕೂ ಅಧಿಕ ಹೆಚ್ಚಳ ಮಾಡಲಾಗಿದೆ.

**ಇನ್ನೂ ಹೆಚ್ಚಳವಾಗಲಿದೆ:** ಸಾಮಾನ್ಯವಾಗಿ ಮುಂಗಾರು ಪ್ರಾರಂಭವಾಗುವ ವೇಳೆ ಅಂದರೆ ಜೂನ್‌ನಲ್ಲಿ ರಸಗೊಬ್ಬರ ಬೆಲೆ ಏರಿಕೆಯಾಗುತ್ತಿತ್ತು. ಆದರೆ ಇಷ್ಟು ದೊಡ್ಡ ಮೊತ್ತ ಏಕಾಏಕಿ ಏರಿಕೆ ಮಾಡಿದರೆ ಸಮಸ್ಯೆಯಾಗುತ್ತದೆ ಎಂಬ ಕಾರಣಕ್ಕೆ ಮಾರ್ಚ್, ಏಪ್ರಿಲ್‌ಗಳಲ್ಲಿ ಏರಿಸಲಾಗುತ್ತಿದೆ. ಈಗ ರೈತರು ಗೊಬ್ಬರ ಖರೀದಿ ಮಾಡುವ ಸಮಯವಲ್ಲ.

12

# ರಸಗೊಬ್ಬರ ಬೆಲೆ 50 ಕೇಜಿಗೆ ₹700 ದಿಢೀರ್ ಏರಿಕೆ!

ಮೊದಲ ಪುಟದಿಂದ

ಆದ್ದರಿಂದ ಅವರಿಗೆ ನೇರವಾಗಿ ಬಿಸಿ ತಟ್ಟುವುದಿಲ್ಲವಾದ್ದರಿಂದ ರೈತರು ಅಷ್ಟಾಗಿ ಆಕ್ರೋಶಗೊಳ್ಳುವುದಿಲ್ಲ ಎಂದೇ ದರ ಹೆಚ್ಚಳ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಅಲ್ಲದೆ ಜೂನ್ ವೇಳೆಗೆ ಇನ್ನಷ್ಟು ಏರಿಕೆಯಾಗಲಿದೆ ಎಂದು ಮೂಲಗಳು ತಿಳಿಸಿವೆ.

**ಕೃತಕ ಅಭಾವ ಸೃಷ್ಟಿ ಸಾಧ್ಯತೆ:** ರಾಜ್ಯದಲ್ಲಿ ಪ್ರಸಕ್ತ ಮುಂಗಾರಿಗೆ 15- 20 ಲಕ್ಷ ಟನ್ ರಸಗೊಬ್ಬರದ ಅಗತ್ಯವಿದೆ. ಈಗಿರುವ ಕಚ್ಚಾವಸ್ತುಗಳ ದರದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಉತ್ಪಾದನೆ ಮಾಡಲು ಕಂಪನಿಗಳು ಹಿಂದೇಟು ಹಾಕುತ್ತಿವೆ. ಹಾಗೊಂದು ವೇಳೆ ಉತ್ಪಾದನೆ ಕಡಿಮೆಯಾದರೆ ಆಗ ಕೃತಕ ಅಭಾವ ಸೃಷ್ಟಿಯಾಗಿ ಪ್ರಸಕ್ತ ಮುಂಗಾರಿಗೆ ರಸಗೊಬ್ಬರ ಅಭಾವ ಸೃಷ್ಟಿಯಾಗಬಹುದು. ಆದ್ದರಿಂದ ಸರ್ಕಾರ ಮುನ್ನೆಚ್ಚರಿಕೆ ವಹಿಸುವುದು ಅಗತ್ಯ. ಇದೇವೇಳೆ ದೇಶಾದ್ಯಂತ ಮುಂಗಾರು ಹಂಗಾಮಿಗೆ ಹೆಚ್ಚೂಕಮ್ಮಿ 500 ಲಕ್ಷ ಟನ್ ರಸಗೊಬ್ಬರದ ಬೇಡಿಕೆ ಇದೆ. ಇಷ್ಟು ದೊಡ್ಡ ಮೊತ್ತದ ರಸಗೊಬ್ಬರ ಉತ್ಪಾದನೆಗೆ ಈ ಪರಿ ದರ ಏರಿಕೆಯಾಗುತ್ತಿರುವುದನ್ನು ನೋಡಿದರೆ ಕೃಷಿ ವಲಯಕ್ಕೆ ಸಾವಿರಾರು ಕೋಟಿ ರುಪಾಯಿ ಹೊರೆಯಾಗಲಿದೆ. ಇದು ಸಹಜವಾಗಿಯೇ ಕೃಷಿ ಉತ್ಪಾದನೆಯ ಮೇಲೆ ಪರಿಣಾಮ ಬೀರಲಿದ್ದು ವಿದೇಶಿ ವಿನಿಮಯದ ಹೊರೆಯೂ ಹೆಚ್ಚಾಗಲಿದೆ.



**ರಸಗೊಬ್ಬರಕ್ಕೆ ಬೇಕಾಗುವ ಕಚ್ಚಾವಸ್ತುಗಳ ಬೆಲೆ ದುಪ್ಪಟ್ಟಾಗಿದೆ. ಚೀನಾ, ಆಫ್ರಿಕಾ ಮೊದಲಾದ ದೇಶಗಳಿಂದ ಆಮದು ಮಾಡಿಕೊಳ್ಳುವ ದರದ ಆಧಾರದ ಮೇಲೆ ರಸಗೊಬ್ಬರ ದರ ಈ ಪರಿ ಏರಿಕೆಯಾಗಿದೆ. ಇತಿಹಾಸದಲ್ಲಿಯೇ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಏರಿಕೆಯಾಗಿರುವುದು ಇದೇ ಮೊದಲು.**

• **ಡಾ.ನಾರಾಯಣಸ್ವಾಮಿ,**
ಮುಖ್ಯಸ್ಥರು, ಇಫ್ಕೋ ಮಾರುಕಟ್ಟೆ ಕರ್ನಾಟಕ ವಿಭಾಗ

09-04-2021
Kp Pg 01


For more information visit University Library Website
Web - uasbagrilibindia.org
E-mail- librarian@uasbangalore.edu.in




### ಸ್ಥಳೀಯ ರೈತರ ಪಹಣಿ ಪಡೆದು ವ್ಯಾಪಾರಿಗಳಿಂದ ಅಕ್ರಮ | ಕ್ವಿಂಟಾಲ್‌ಗೆ 800 ರೂ. ಲಾಭ

# ರಾಜ್ಯದ ಖರೀದಿ ಕೇಂದ್ರಕ್ಕೆ ಆಂಧ್ರ ಜೋಳ

**ಚಂದ್ರಶೇಖರ ಬೆನ್ನೂರು** ಸಿಂಧನೂರು (ರಾಯಚೂರು)

ರಾಜ್ಯದ ರೈತರನ್ನು ಆರ್ಥಿಕ ಸಂಕಷ್ಟದಿಂದ ಪಾರುಮಾಡುವ ಉದ್ದೇಶದೊಂದಿಗೆ ಸರಕಾರ ತೆರೆದಿರುವ ಬೆಂಬಲ ಬೆಲೆ ಖರೀದಿ ಕೇಂದ್ರಕ್ಕೆ ನೆರೆಯ ಆಂಧ್ರಪ್ರದೇಶದ ಜೋಳ ಎಗ್ಗುಸಿಗ್ಗಿಲ್ಲದೆ ಹರಿದು ಬರುತ್ತಿದೆ.

**ಬೆಲೆ ಅಲ್ಲಿ ಇಲ್ಲಿ?**

**ಆಂಧ್ರಪ್ರದೇಶ**
ಬಿಳಿ ಜೋಳ
ಕ್ವಿಂಟಾಲ್‌ಗೆ **1700**

**ಕರ್ನಾಟಕ**
ಖರೀದಿ ಕೇಂದ್ರ
ಕ್ವಿಂಟಾಲ್‌ಗೆ **2640**

ತಾಲೂಕಿನಲ್ಲಿರುವ ಜೋಳ ಖರೀದಿ ಕೇಂದ್ರಗಳಲ್ಲಿ ಕಳೆದೆರಡು ತಿಂಗಳಿಂದ ರೈತರು ಜೋಳ ಮಾರಾಟ ಮಾಡುತ್ತಿದ್ದಾರೆ. ಈ ಖರೀದಿ ಕೇಂದ್ರಗಳಲ್ಲಿ ಮಾರುಕಟ್ಟೆ ದರಕ್ಕಿಂತ 600 ರಿಂದ 800 ರೂ.ಗಳವರೆಗೆ ಹೆಚ್ಚಿನ ದರವಿದೆ. ಹಿಂದಿಗಿಂತ ಈ ಬಾರಿ ಜೋಳ ಮಾರಾಟ ಮಾಡಿದ ರೈತರಿಗೆ ಕೂಡಲೇ ಹಣವೂ ಪಾವತಿಯಾಗುತ್ತಿದೆ. ಇದನ್ನೇ ದಾಳವಾಗಿಸಿಕೊಂಡಿರುವ ಕೆಲವು ವರ್ತಕರು, ಹೊರ ರಾಜ್ಯಗಳಿಂದ ಜೋಳ ಖರೀದಿಸಿ, ಸಿಂಧನೂರಿನ ಖರೀದಿ ಕೇಂದ್ರಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಸರಕಾರದ ಕಣ್ಣಿಗೆ ಮಣ್ಣೆರಚುತ್ತಿದ್ದಾರೆ.

**ಹೇಗೆ ವ್ಯಾಪಾರ?:** ರೈತರ ಹೆಸರಿನಲ್ಲಿ ಉದ್ಯಮಿಗಳು ಲಾಭ ಪಡೆಯಲು ಮುಂದಾಗಿರುವುದು ಅಚ್ಚರಿ ಮೂಡಿಸಿದೆ. ಕ್ವಿಂಟಾಲ್‌ಗೆ 800 ರೂ. ಲಾಭ ಬರುತ್ತಿರುವುದರಿಂದ, ಭರ್ಜರಿ ವಹಿವಾಟು ನಡೆಯುತ್ತಿದೆ. ಪಕ್ಕದ ಆಂಧ್ರಪ್ರದೇಶದಲ್ಲಿ ಪ್ರತಿ ಕ್ವಿಂಟಾಲ್ ಜೋಳಕ್ಕೆ 1600 ರಿಂದ 1700 ರೂಪಾಯಿ ದರವಿದೆ. ಅಲ್ಲಿ ಜೋಳ ಖರೀದಿಸುವ ವರ್ತಕರು, ನೇರವಾಗಿ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಖರೀದಿ ಕೇಂದ್ರಕ್ಕೆ ತರುತ್ತಿದ್ದಾರೆ. ಆಂಧ್ರಪ್ರದೇಶದ ಲಾರಿಗಳಲ್ಲಿಯೇ ಜೋಳವನ್ನು ತರುತ್ತಿರುವುದು ಅನುಮಾನಕ್ಕೆ ಬಲ ನೀಡಿದೆ. ಖರೀದಿ ಕೇಂದ್ರಕ್ಕೆ ಮಾರಾಟ ಮಾಡಿ, ನಂತರ ಭರ್ಜರಿ ಲಾಭಗಳಿಸುವ ವಂಚನೆ ಜಾಲ ತೆರೆಮರೆಯಲ್ಲಿ ಸಕ್ರಿಯವಾಗಿದೆ.

**ದುರಾಲೋಚನೆ:** ಸರಕಾರದ ಖರೀದಿ ಕೇಂದ್ರಕ್ಕೆ ಜೋಳ ಮಾರಾಟ ಮಾಡಬೇಕಿದ್ದರೆ, ರೈತರ ಹೆಸರಿನಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದಲ್ಲಿ ಫ್ರೂಟ್ ಐಡಿ ಆಧಾರದಲ್ಲಿ ಹೆಸರು, ಬೆಳೆ ಮಾರಾಟದ ಕುರಿತು ಹೆಸರು ನೋಂದಾಯಿಸಬೇಕು. ಈಗಾಗಲೇ ಬಹುತೇಕ ರೈತರು ಬೆಳೆ ಮಾರಾಟ ಮಾಡಿದ್ದಾರೆ. ಇದನ್ನೇ ದಾಳವಾಗಿಸಿಕೊಂಡ ವರ್ತಕರು, ತಮಗೆ ಬೇಕಿರುವ ವರ್ತಕರ ಪಹಣಿಗಳನ್ನು ಪಡೆದು, ಅವರ ಹೆಸರಿನಲ್ಲಿ ಬೆಳೆ ಮಾರಾಟಕ್ಕೆ ಹೆಸರು ನೋಂದಾಯಿಸುತ್ತಿದ್ದಾರೆ. ಸರಕಾರದಿಂದ ಜೋಳ ಖರೀದಿಯ ಹಣ ಬಂದ ಬಳಿಕ ರೈತರಿಂದ ಅದನ್ನು ತೆಗೆದುಕೊಳ್ಳುವ ಯೋಚನೆಯಲ್ಲಿ ವ್ಯಾಪಾರಿಗಳು ಇದ್ದಾರೆ. ಈಗಾಗಲೇ ಸಾವಿರಾರು ಕ್ವಿಂಟಾಲ್ ಜೋಳವನ್ನು ಇದೇ ರೀತಿ ಮಾರಾಟ ಮಾಡಿರುವ ಆರೋಪ ಕೇಳಿಬಂದಿದೆ.




ಜೋಳ ಖರೀದಿ ಕೇಂದ್ರದಲ್ಲಿ ರೈತರ ಎಫ್‌ಐಡಿ ಸಂಖ್ಯೆ ಆಧರಿಸಿ, ಜೋಳ ಖರೀದಿಸಲಾಗುತ್ತಿದೆ. ಕಳೆದ ನಾಲ್ಕೈದು ದಿನಗಳಿಂದ ವ್ಯಾಪಾರಿಗಳು ರೈತರ ಹೆಸರಿನಲ್ಲಿ ಜೋಳ ಮಾರಾಟಕ್ಕೆ ಬರುತ್ತಿದ್ದಾರೆ ಎಂಬ ದೂರುಗಳು ಬಂದಿವೆ. ಈ ಕುರಿತಂತೆ ಹೆಚ್ಚಿನ ನಿಗಾವಹಿಸುತ್ತೇವೆ. ಸರಕಾರದ ಯೋಜನೆ ದುರ್ಬಳಕೆಗೆ ಅವಕಾಶ ನೀಡುವುದಿಲ್ಲ,

**-ಶ್ರೀನಿವಾಸರೆಡ್ಡಿ** ಜಿಲ್ಲಾ ವ್ಯವಸ್ಥಾಪಕರು, ಕೆಎಫ್‌ಸಿಎಸ್‌ಸಿ, ರಾಯಚೂರು

**ಲೆಕ್ಕಾಧಿಕಾರಿಗಳ ದೋಖಾ**

ಮುಖ್ಯವಾಗಿ ಸರಕಾರದಿಂದ ಈಗಾಗಲೇ ಬೆಳೆ ಸಮೀಕ್ಷೆಯಾಗಿದೆ. ರೈತರು ತಮ್ಮ ಹೊಲದಲ್ಲಿ ಯಾವ ಬೆಳೆ ಬೆಳೆದಿದ್ದಾರೆ ಎಂಬ ಮಾಹಿತಿಯೂ ಆನ್‌ಲೈನ್‌ನಲ್ಲಿ ನಮೂದಾಗಿದೆ. ಆದರೆ, ಖರೀದಿ ಕೇಂದ್ರದ ಲಾಭ ಪಡೆಯಲು ಮುಂದಾಗಿರುವ ಕೆಲವು ವ್ಯಾಪಾರಿಗಳು, ಗ್ರಾಮ ಲೆಕ್ಕಾಧಿಕಾರಿಗಳನ್ನು ಬಳಸಿಕೊಂಡು ಬೆಳೆ ಸಮೀಕ್ಷೆಯಲ್ಲಿ ಇದ್ದ ಬೆಳೆಯನ್ನು ಬದಲಾಯಿಸಿ, ಜೋಳವನ್ನು ನಮೂದಿಸುತ್ತಿದ್ದಾರೆ. ಮುಕ್ಕುಂದಾ ಗ್ರಾಮದಲ್ಲಿ 10 ಎಕರೆ ಹತ್ತಿ ಬೆಳೆದಿದ್ದ ಭೂಮಿಯಲ್ಲಿ, ಇತ್ತೀಚೆಗೆ ಜೋಳವೆಂದು ಸಮೀಕ್ಷೆಯಲ್ಲಿ ನಮೂದು ಮಾಡಿರುವ ದೂರು ಕೇಳಿಬಂದಿದೆ. ಈ ಮೂಲಕ ತಾವು ಬೇರೆ ಕಡೆ ಖರೀದಿಸಿದ ಜೋಳವನ್ನು ಖರೀದಿ ಕೇಂದ್ರಕ್ಕೆ ಮಾರಾಟ ಮಾಡಲು ಪ್ಲ್ಯಾನ್ ಮಾಡಿದ್ದಾರೆ. ಸರಕಾರದ ಯೋಜನೆಯ ಲಾಭ ರೈತರಿಗೆ ಸಿಗಲಿ ಎಂದುಕೊಂಡರೆ, ವ್ಯಾಪಾರಿಗಳ ಸ್ವಲಾಭದಿಂದ ಅರ್ಹರು ವಂಚನೆಗೆ ಒಳಗಾಗುವಂತಾಗಿದೆ.


09-04-2021 Vk Pg 08



09-04-2021 Ind Exp Pg 06


# Punjab agrees to roll out online direct cash transfer of MSP to farmers' a/cs

**Dipak Dash & Vibhor Mohan** | TNN

**New Delhi/ Chandigarh:** The Punjab government on Thursday agreed to roll out the online direct cash transfer of MSP to bank accounts of farmers instead of arhtiyas accounts. This will start from the current rabi marketing season (RMS), which will kick off in Punjab from Saturday. With this the MSP payment to farmers across the country will become online.

Confirming this, food and public distribution secretary Sudhanshu Pandey told TOI, "The Punjab government has agreed that for the wheat procurement (RMS) starting from April 10, the MSP given to farmers shall be paid directly to their bank accounts on the basis of physical document of the land duly counter signed by either patwari or sarpanch of the village. In six months, the land record will also be integrated online."

The arathiyas will continue to get their commission of 2.5% separately, officials said. The breakthrough came at a meeting chaired by food minister Piyush Goyal which was attended by four ministers from Punjab including finance and food ministers.

Punjab finance minister Manpreet Singh Badal, who attended the meeting, told TOI, "The Centre refused to budge on the direct cash transfer issue and insisted that Punjab will have to transfer money directly to the farmers within 48 hours. Otherwise, they (the Centre) will not procure from Punjab."

PTI



A farmer inspects his wheat crop on the outskirts of Amritsar

## 'Arhtiyas' to get interest on dues since last procurement, says Haryana CM

Haryana CM Manohar Lal Khattar on Thursday said all those 'arhtiyas' whose commission and labour wage dues have been pending since the last procurement season would get interest on them for the delayed amount. "The process of payment of interest will start from today and the 'arhtiyas' have been asked to get their accounts verified. Necessary directions have been issued to the food and civil supplies department," an official statement quoting Khattar said. TNN